**ದಿನಾಂಕ: 23-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ-ಪ್ರತಿವಾದಿಯ ಪರ ಶ್ರೀ.ಆರ್.ಪಿ , ವಕೀಲರಿಂದ:-**

03. ನನ್ನ ತಾಯಿ ಹೆಸರು ಕೆಂಪಮ್ಮ. ಈಗ ಸಾಕ್ಷಿಗೆ ದಿ.13-09-1952 ನೇ ಇಸವಿಯ ಭೋಗ್ಯಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು, ಅದರಂತೆ ನಿಮ್ಮ ತಾಯಿಯು ಸರ್ವೆ ನಂ.89 ಕ್ಕೆ ಸಂಬಂಧಿಸಿದಂತೆ ಭೋಗ್ಯ ಪತ್ರವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ದಿ.23-12-2019 ರ ವಿಭಾಗ ಪತ್ರದ ನಕಲು ಪ್ರತಿಯನ್ನು ತೋರಿಸಿದ್ದು, ಅದರಂತೆ ನೀವು ಮತ್ತು ನಿಮ್ಮ ಸಹೋದರವರು ಸರ್ವೆ ನಂ.150 ಕ್ಕೆ ಸಂಬಂಧಿಸಿದಂತೆ ವಿಭಾಗವನ್ನು ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಭಾಗ ಪತ್ರವು ನಕಲು ಪ್ರತಿಯಾದ ಕಾರಣದಿಂದ ನಿಶಾನೆಯಾಗಿ ಗುರುತಿಸಿರುವುದಿಲ್ಲ. ಈಗ ಸಾಕ್ಷಿಗೆ ದಿ.04-07-2022 ರ ದಾನಪತ್ರದ ನಕಲು ಪ್ರತಿಯನ್ನು ತೋರಿಸಿದ್ದು, ಅದರಂತೆ ನೀವು ನಿಮ್ಮ ಮಗಳಿಗೆ ದಾನಪತ್ರವನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾನಪತ್ರವು ನಕಲು ಪ್ರತಿಯಾದ ಕಾರಣದಿಂದ ನಿಶಾನೆಯಾಗಿ ಗುರುತಿಸಿರುವುದಿಲ್ಲ. ಈಗ ಸಾಕ್ಷಿಗೆ ನಿಪಿ-17 ನ್ನು ತೋರಿಸಿದ್ದು, ಅದರಂತೆ 2013 ನೇ ಇಸವಿಯಲ್ಲಿ ನೀವು ನೀಡಿರುವ ದೂರಿಗೆ ಸಂಬಂಧಿಸಿದಂತೆ ಪ್ರತಿವಾದಿ ಮತ್ತು ಅವರ ತಂದೆಯವರು ದಿ.05-08-2013 ರಂದು ಅವರ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2013 ನೇ ಇಸವಿಯಲ್ಲಿ ನೀವು ಪೋ. ಠಾಣೆಗೆ ನೀಡಿರುವ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಮುಂದಿನ ದಿನಾಂಕಗಳಲ್ಲಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಿಪಿ-

16 ಕ್ಕೆ ಸಂಬಂಧಿಸಿರುವ ದೂರಿನ ಪ್ರತಿಯನ್ನು ನೀವು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಮುಂದಿನ ದಿನಾಂಕಗಳಲ್ಲಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ.

04. ನೀವು 2021 ನೇ ಇಸವಿಯ ಡಿಸೆಂಬರ್ ತಿಂಗಳಿನಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ತತ್ಕಾಲ್ ಪೋಡಿಯನ್ನು ಮಾಡಿಕೊಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ದಾವಾಸ್ವತ್ತಿನಲ್ಲಿ ಇಲ್ಲದೇ ಇರುವ ಕಾರಣದಿಂದ ಸದರಿ ಅರ್ಜಿಯನ್ನು ವಜಾ ಮಾಡಲಾಯಿತು ಎಂದರೆ ಸಾಕ್ಷಿಯು ಅಧಿಕಾರಿಗಳು ದಾವಾಸ್ವತ್ತಿನ ಬಳಿ ಬಂದ ಸಮಯದಲ್ಲಿ ತಾನು ಊರಿನಲ್ಲಿ ಇರಲಿಲ್ಲ ಆ ಸಮಯದಲ್ಲಿ ಪ್ರತಿವಾದಿಯು ಅಧಿಕಾರಿಗಳಿಗೆ ಹಣವನ್ನು ನೀಡಿ ಆ ರೀತಿ ಆದೇಶವನ್ನು ಮಾಡಿಸಿದ್ದಾರೆ ಎನ್ನುತ್ತಾರೆ. ಪ್ರತಿವಾದಿಯ ಅಧಿಕಾರಿಗಳಿಗೆ ಹಣವನ್ನು ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನಾನು ಅವರ ಮೇಲಾಧಿಕಾರಿಗಳಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ, ಆದರೆ ಅವರ ಬಳಿ ಮೌಖಿಕವಾಗಿ ಕೇಳಿರುತ್ತೇನೆ. ನೀವು ದಾವಾಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ಗ್ರಾಮಸ್ತರ ಸಮಕ್ಷಮದಲ್ಲಿ ಮಹಜರ್ ನ್ನು ಮಾಡಿ ಸದರಿ ಅರ್ಜಿಯನ್ನು ವಜಾ ಮಾಡಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

05. ನಿಮ್ಮ ತಂದೆಯಾದ ಗಂಗಾಬೋವಿ ಮತ್ತು ಗುಡ್ಡಿಮಗಗಂಗಾ ಉ. ಗಂಗಾರವರು ಬೇರೆ ಬೇರೆ ಆಗಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಗಂಗಾಬೋವಿಯವರಿಗೆ ವೆಂಕಟೇಶಯ್ಯ, ಅನಂತು, ಜಯಮ್ಮ ಮತ್ತು ಗಂಗಯ್ಯ ಎಂಬ ಮಕ್ಕಳು ಇದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸರ್ವೆ ನಂ.89 ಕ್ಕೆ ಸಂಬಂಧಿಸಿದಂತೆ 1933 ನೇ ಇಸವಿಯಲ್ಲಿಯೇ ಹಿಸ್ಸಾ ಆಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ.89 ನ್ನು ಹಿಸ್ಸಾ ಮಾಡಿದ ನಂತರ ಸರ್ವೆ ನಂ.89/1 ರಸ್ವತ್ತಿಗೆ ಸಂಬಂಧಿಸಿದಂತೆ

ಗಂಗಾಬೋವಿ, ಗುಡ್ಡಿಮಗಗಂಗಾ, ಯಲ್ಲಾಬೋವಿ ಮತ್ತು ಚಿಕ್ಕಗಂಗಾಬೋವಿಯವರ ಹೆಸರಿಗೆ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮಗೆ ಚೌಡಯ್ಯ ಎಂಬ ತಮ್ಮನು ಇದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಗಂಗಾಬೋವಿಯವರ ಹೆಸರಿನಲ್ಲಿ ಇದ್ದ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಸುಳ್ಳು ಮ್ಯುಟೇಶನ್ ನ್ನು ಮಾಡಿಸಿಕೊಂಡು ಪ್ರತಿವಾದಿಯ ವಿರುದ್ದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**